# ಶ್ರೀರಾಮಕೃಷ್ಣ ಮಠ



(ಸ್ಥಾಪನೆ : 1987)
New Natham Road, Reserve Line, Madurai – 625 014,
Ph:0452-2680 224
**email:** rkmath@dataone.in; srirkmathmadurai@gmail.com; **web**:rkmath.net

ಆತ್ಮೀಯ ಭಕ್ತರೇ, ಹಾರ್ದಿಕ ಶುಭಾಶಯಗಳು ಮತ್ತು ಅಭಿನಂದನೆಗಳು.

ಮದುರೈ ನಗರವು ದಕ್ಷಿಣಭಾರತದ ಅತ್ಯಂತ ಶ್ರೇಷ್ಠ ತೀರ್ಥಸ್ಥಾನಗಳಲ್ಲಿ ಒಂದು. ಜಗನ್ಮಾತೆಯಾದ ಶ್ರೀಮೀನಾಕ್ಷಿಯ ಬೃಹದ್ ದೇವಸ್ಥಾನ ಇಲ್ಲಿನ ಪ್ರಮುಖ ಆಕರ್ಷಣೆಯಾಗಿದೆ. ಸದ್ಯಕ್ಕೆ ಮದುರೈ ರಾಮಕೃಷ್ಣ ಮಠದ ಮೂಲಕ ಈ ಕೆಳಗಿನ ಸೇವಾಕಾರ್ಯಗಳನ್ನು ನಡೆಸಲಾಗುತ್ತಿದೆ:

1. **ಧಾರ್ಮಿಕ ಕಾರ್ಯಕ್ರಮಗಳು :** ನಿತ್ಯಪೂಜೆ, ವಿಶೇಷಪೂಜೆಗಳು, ಧಾರ್ಮಿಕ ಪ್ರವಚನಗಳು, ಆಧ್ಯಾತ್ಮಿಕ ಶಿಬಿರಗಳು, ಅಖಂಡ ನಾಮ ಜಪ, ಯುವಕರಿಗಾಗಿ ಶಿಬಿರಗಳು, ಶಾಲಾಕಾಲೇಜು ವಿದ್ಯಾರ್ಥಿಗಳಿಗಾಗಿ ವ್ಯಕ್ತಿತ್ವ ವಿಕಸನ ಶಿಬಿರಗಳು, ವಿಶೇಷವಾಗಿ ಶಿಕ್ಷಕರಿಗೇ ಮೀಸಲಾಗಿರುವ ಆಧ್ಯಾತ್ಮಿಕ ಶಿಬಿರಗಳು ಇತ್ಯಾದಿ.

2. **ಉಚಿತ ಔಷಧಾಲಯ :** ಮಠದಲ್ಲಿರುವ ಅಲೋಪತಿ ಮತ್ತು ಹೋಮಿಯೋಪತಿ ಉಚಿತ ಔಷಧಾಲಯಗಳು ಬಡಜನರಿಗೆ ವೈದ್ಯಕೀಯ ಸಹಾಯದ ಜೊತೆಗೆ ಉಚಿತ ಔಷಧಿಗಳನ್ನು ಒದಗಿಸುತ್ತಿವೆ. ಹಾಗೆಯೇ ಕಾಲಕಾಲಕ್ಕೆ ವೈದ್ಯಕೀಯ ಶಿಬಿರಗಳು ಮತ್ತು ಕಣ್ಣಿನ ಶಿಬಿರಗಳನ್ನು ಆವಶ್ಯಕತೆ ಇರುವ ಸಾಮಾನ್ಯ ಜನತೆಗೆ ಉಚಿತವಾಗಿ ಆಯೋಜಿಸಲಾಗುತ್ತಿದೆ.

3. **ಉಚಿತ ಬೋಧನಾ ಕೇಂದ್ರ :** ಮಠವು ಪ್ರತಿ ದಿನ ಸಂಜೆ ಉಚಿತ ಬೋಧನಾ ತರಗತಿಯನ್ನು (ಸಂಜೆ 5 ರಿಂದ 8 ಗಂಟೆಯವರೆಗೆ) ನಡೆಸುತ್ತಿದೆ. ಹತ್ತಿರದ ಕೊಳೆಗೇರಿಯಿಂದ ಬರುವ ಸುಮಾರು 500 ಬಡ ಹಾಗೂ ಹಿಂದುಳಿದ ಜನಾಂಗದ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ವಿದ್ಯಾರ್ಥಿಗಳು ಉಚಿತ ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅವರಿಗೆ ಪ್ರತ್ಯೇಕ ಬೋಧನೆಯ ಆವಶ್ಯಕತೆ ಇದ್ದರೂ, ಅದನ್ನು ಭರಿಸುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ.

ಪ್ರತಿ ವರ್ಷ ಶೈಕ್ಷಣಿಕ ವರ್ಷದ ಆರಂಭದಲ್ಲಿ, ಪಠ್ಯಪುಸ್ತಕಗಳು ಮತ್ತು ನೋಟ್ ಪುಸ್ತಕಗಳನ್ನು ನಮ್ಮ ಬೋಧನಾ ಕೇಂದ್ರದ ಪ್ರತಿಯೊಬ್ಬ ವಿದ್ಯಾರ್ಥಿಗೂ ವಿತರಿಸಲಾಗುತ್ತಿದೆ. ಇದಲ್ಲದೆ, ಅರ್ಹ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. ಕಳೆದ ವರ್ಷ, ₹ 82,484 ಮೌಲ್ಯದ ನೋಟ್ ಪುಸ್ತಕಗಳನ್ನು ವಿತರಿಸಲಾಗಿದೆ. ಹಾಗೆಯೇ ₹ 2,45,950 ರಷ್ಟು ಮೊಬಲಗನ್ನು ಬಡ ಮತ್ತು ಅರ್ಹ ವಿದ್ಯಾರ್ಥಿಗಳಿಗೆ 'ವಿದ್ಯಾರ್ಥಿವೇತನ'ದ ರೂಪದಲ್ಲಿ ನೀಡಲಾಗಿದೆ.

4. **ಕೊಳಚೆಗೇರಿಯ ಬಡ ಮಕ್ಕಳಿಗೆ ಅನ್ನದಾನ ಯೋಜನೆ :** ಪ್ರತಿನಿತ್ಯ ಬೆಳಗ್ಗೆ ಏಳು ಗಂಟೆಗೆ ಮಠದ ಪ್ರಾಂಗಣದಲ್ಲಿ ಹತ್ತಿರದ ಕೊಳಚೆಗೇರಿಗಳಿಂದ ಬರುವ ಸುಮಾರು 280 ಬಡ ಮಕ್ಕಳಿಗೆ ಬೆಳಗಿನ ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿದೆ.

**ದೇಣಿಗೆಗಳಿಗಾಗಿ ಮನವಿ :** ಮೇಲಿನ ಉದಾತ್ತ ಸೇವಾಯೋಜನೆಗಳಿಗೆ ಉದಾರವಾಗಿ ಧನಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ₹ 5000 ಕ್ಕೂ ಮೇಲ್ಪಟ್ಟ ದೇಣಿಗೆಗಳನ್ನು 'ದತ್ತಿ (Endowments)' ರೂಪದಲ್ಲಿ ನೀಡಬಹುದಾಗಿದೆ. ಎಲ್ಲ ದೇಣಿಗೆಗಳನ್ನೂ 'Sri Ramakrishna Math, Madurai' ಹೆಸರಿಗೆ ಬರೆದ ಚೆಕ್ ಅಥವಾ ಡಿ.ಡಿ. ಮೂಲಕ ಮೇಲಿನ ವಿಳಾಸಕ್ಕೆ ಕಳಿಸಿಕೊಡಬೇಕಾಗಿ ವಿನಂತಿ. ದೇಣಿಗೆಗಳಿಗೆ ಆದಾಯ ಕರ ಅಧಿನಿಯಮ 80–G ಅನ್ವಯ ಕರವಿನಾಯಿತಿ ಇದೆ. ಸಣ್ಣದಿರಲಿ, ದೊಡ್ಡದಿರಲಿ ಎಲ್ಲಾ ಬಗೆಯ ದೇಣಿಗೆಗಳನ್ನೂ ಕೃತಜ್ಞತೆಯಿಂದ ಸ್ವೀಕರಿಸಲಾಗುವುದು ಮತ್ತು ರಸೀದಿಯನ್ನು ಕಳಿಸಿಕೊಡ ಲಾಗುವುದು.

ಮದುರೈಯ ಶ್ರೀಮೀನಾಕ್ಷಿ, ಶ್ರೀಸುಂದರೇಶ್ವರ ಹಾಗೂ ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಕೃಪಾಶೀರ್ವಾದಗಳು ನಿಮ್ಮೆಲ್ಲರ ಮೇಲೆಯೂ ಇರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಇಂತಿ ಭಗವತ್ಸೇವೆಯಲ್ಲಿ ತಮ್ಮವ,

**ಸ್ವಾಮಿ ಕಮಲಾತ್ಮಾನಂದ**

ಅಧ್ಯಕ್ಷರು

# ಕಾಮ–ಕಾಂಚನ, ಮಾಯೆ

**ಭ**ಗವದ್ಗೀತೆಯಲ್ಲಿ, ಅರ್ಜುನನು ಒಂದು ಪ್ರಮುಖವಾದ ಸಮಸ್ಯೆಯನ್ನು ಶ್ರೀಕೃಷ್ಣನ ಮುಂದೆ ತೋಡಿಕೊಳ್ಳುತ್ತಾನೆ: "ಎಲೈ ಕೃಷ್ಣ, ಒಬ್ಬ ವ್ಯಕ್ತಿಯು ತಾನು ಬಯಸದಿದ್ದರೂ, ಯಾವುದೋ ಒಂದರಿಂದ ಪ್ರೇರಿತನಾಗಿ ಪಾಪವನ್ನು ಆಚರಿಸುತ್ತಾನೆ. ಅದು ಅವನನ್ನು ಬಲಾತ್ಕಾರದಿಂದ ನಿಯಂತ್ರಿಸುವ ಹಾಗೆ ಕಾಣಬರುತ್ತದೆ. ಅದಾವುದು?" ಅದಕ್ಕೆ ಶ್ರೀಕೃಷ್ಣನು ನೀಡುವ ಉತ್ತರ ಬಹಳ ಮಾರ್ಮಿಕವಾಗಿದೆ:

ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್ ॥ (೩.೩೭)

"ಇದೇ ಕಾಮ, ಇದೇ ಕ್ರೋಧ. ಇದಕ್ಕೆ ಮೂಲ ರಜೋಗುಣ. ಇದು ಎಲ್ಲವನ್ನೂ ಹಿಡಿದುಕೊಳ್ಳುತ್ತದೆ, ಮಹಾ ಪಾಪಕರವಾಗಿದೆ. ಇದನ್ನೇ ಇಲ್ಲಿ ನೀನು ಶತ್ರುವೆಂದು ತಿಳಿಯಬೇಕು."

ಮುಂದೆ, ಕಾಮದ ದುಷ್ಪ್ರಭಾವವನ್ನು ಕೃಷ್ಣನು ವಿವರಿಸಿ ಹೇಳುತ್ತಾನೆ: "ಈ ಕಾಮವು ಜ್ಞಾನವನ್ನು ಮುಚ್ಚಿಬಿಡುತ್ತದೆ. ಇದು ಜ್ಞಾನಿಗೆ ಯಾವಾಗಲೂ ವೈರಿಯೇ ಸರಿ. ಕಾಮವನ್ನು ಪೂರೈಸಲು ಸಾಧ್ಯವಾಗದು. ಇದನ್ನು ತೃಪ್ತಿಪಡಿಸಲು ಅಸಾಧ್ಯ. ಕಾಮಕ್ಕೆ ಮೂರು ಆಶ್ರಯಗಳು – ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ. ಇವುಗಳ ಮೂಲಕ ಕಾಮವು ಜ್ಞಾನವನ್ನು ಮುಚ್ಚುತ್ತದೆ. ಆ ಮೂಲಕ ಜೀವಿಯನ್ನು ಮೋಹಗೊಳಿಸುತ್ತದೆ."

ಶ್ರೀರಾಮಕೃಷ್ಣರು ಈ ಕಾಮವನ್ನೇ, **ಕಾಮಿನಿ–ಕಾಂಚನ** ಎಂದು ನಿರ್ದಿಷ್ಟವಾಗಿ ಹೆಸರಿಸಿ ತೋರಿಸುತ್ತಾರೆ. ಜಗತ್ತಿನ ಜನರ ಕಾಮವೆಲ್ಲವೂ ಪ್ರಾಯಶಃ 'ಇಂದ್ರಿಯಲಾಲಸೆ' ಮತ್ತು 'ಧನಲೋಭ'ಗಳ ರೂಪದಲ್ಲಿಯೇ ಕಾಣಬರುತ್ತದೆ. ಹೀಗಾಗಿ ಶ್ರೀರಾಮಕೃಷ್ಣರ ಈ ವಿಂಗಡಣೆ ಅತ್ಯಂತ ಸಮರ್ಪಕವಾಗಿದೆ ಮಾತ್ರವಲ್ಲ, ಅವರ ಆಳವಾದ ದೃಷ್ಟಿಕೋನದ ಹಾಗೂ ಅಪಾರ ಜೀವನಾನುಭವದ ಫಲವಾಗಿದೆ.

## ಕಾಮಿನಿ–ಕಾಂಚನ

ಕಾಮವು ಮನುಷ್ಯನನ್ನು ದುರ್ಬಲನನ್ನಾಗಿ ಮಾಡುತ್ತದೆ, ಚಾರಿತ್ರ್ಯಹೀನನನ್ನಾಗಿ ಮಾಡುತ್ತದೆ. ಅದು ಹೇಗೆ ಎಂಬುದನ್ನು ಶ್ರೀರಾಮಕೃಷ್ಣರು ಹಲವಾರು ಕಥೆಗಳ ಮೂಲಕ ನಮಗೆ ಮನದಟ್ಟು ಮಾಡಿಸುತ್ತಾರೆ. ಅದರಲ್ಲಿ ಒಂದು ಹೀಗಿದೆ: ಜಯಪುರದ ಗೋವಿಂದಜೀ ದೇವಸ್ಥಾನದ ಪೂಜಾರಿಗಳು ಹಿಂದೆ ಬ್ರಹ್ಮಚಾರಿಗಳಾಗಿದ್ದರು. ಒಮ್ಮೆ ಮಹಾರಾಜರು ಅವರಿಗೆ ಹೇಳಿಕಳಿಸಿದರು. ಪೂಜಾರಿಗಳು ದೂತನಿಗೆ, "ರಾಜರೇ ಇಲ್ಲಿಗೆ ಬರಲಿ" ಎಂದರು. ರಾಜ ಮಂತ್ರಿಗಳೊಡನೆ ಸಮಾಲೋಚನೆ ಮಾಡಿ, ಅವರಿಗೆಲ್ಲ ಮದುವೆ ಮಾಡಿಸಿಬಿಟ್ಟ. ಆಗ, ಅವರೇ ರಾಜನ ಹತ್ತಿರ, ತಾವೇ ತಾವಾಗಿ ಬರಲಾರಂಭಿಸಿದರು. ಇಲ್ಲಿ ಮದುವೆ ಮಾಡಿಕೊಳ್ಳುವುದು ತಪ್ಪೆಂದು ಹೇಳಿಲ್ಲ. ಆದರೆ ಮದುವೆ ಮಾಡಿಕೊಂಡ ಮೇಲೆ, ಆ ಪೂಜಾರಿಗಳು ಮಾನಸಿಕವಾಗಿ ಹೇಗೆ ದುರ್ಬಲರಾದರು, ರಾಜನನ್ನೇ ಅವಲಂಬಿಸಿದರು ಎನ್ನುವುದು ಗಮನಿಸಬೇಕಾದ ಸಂಗತಿ.

ಒಬ್ಬ ವ್ಯಕ್ತಿ ಉನ್ನತ ಅಧಿಕಾರದಲ್ಲಿ ಇರಬಹುದು. ಆದರೆ, ಕೆಲವೊಮ್ಮೆ ಅವನು ಒಬ್ಬ ಸ್ತ್ರೀಯ ದಾಸನಾಗಿರುತ್ತಾನೆ. ಆ ಮೂಲಕ ತನ್ನ ವ್ಯಕ್ತಿತ್ವವನ್ನು ಹಾಳುಮಾಡಿಕೊಂಡಿರುತ್ತಾನೆ. ಹೀಗೆ ಕಾಮವು ಆ ವ್ಯಕ್ತಿಯ ಅಧಃಪತನಕ್ಕೆ ಕಾರಣವಾಗುತ್ತದೆ. ಅಂಥ ಒಂದು ಪ್ರಸಂಗವನ್ನು ಶ್ರೀರಾಮಕೃಷ್ಣರು ಸ್ವಾರಸ್ಯಕರವಾಗಿ ಹೀಗೆ ಹೇಳುತ್ತಾರೆ: ಒಬ್ಬ ಕೆಲಸಕ್ಕಾಗಿ ಒಂದು ಆಫೀಸಿಗೆ ಮತ್ತೆ ಮತ್ತೆ ಅಲೆದನು. ಆಫೀಸಿನ ಮ್ಯಾನೇಜರ್ ಯಾವಾಗಲೂ, "ಈಗ ಕೆಲಸ ಇಲ್ಲ" ಎನ್ನುತ್ತಿದ್ದನು. ಹೀಗೆಯೇ ಕೆಲವು ದಿನಗಳು ಕಳೆದವು. ಒಂದು ದಿನ ಅವನು ತನ್ನ ಗೋಳನ್ನು ಒಬ್ಬ ಮಿತ್ರನ ಹತ್ತಿರ ಹೇಳಿಕೊಂಡನು. ಆಗ ಅವನು, "ಎಂಥ ಮೂರ್ಖ ನೀನು. ಸುಮ್ಮನೆ ವ್ಯರ್ಥವಾಗಿ ಕಾಲ ಕಳೆಯುತ್ತಿರುವೆ. ನೀನು ಗುಲಾಬಳ ಹತ್ತಿರ ಹೋಗು. ಆಗ ನಿನ್ನ ಕೆಲಸ ಈಡೇರುವುದು" ಎಂದ. ಗುಲಾಬಳೆಂದರೆ, ಮ್ಯಾನೇಜರ್‌ನ ಉಪಪತ್ನಿ. ಗುಲಾಬಳನ್ನು ಪ್ರಾರ್ಥಿಸಿಕೊಂಡಾಗ, ಅವನಿಗೆ ಕೆಲಸ ಸಿಕ್ಕಿತು.

"ದೇವರು ನಿಜವಾಗಿ ನಮ್ಮ ಹೃದಯದಲ್ಲಿರುವುದನ್ನು ನೋಡುತ್ತಾನೆ. ವ್ಯಕ್ತಿಯು ಏನು ಮಾಡುತ್ತಾನೆಯೋ, ಎಲ್ಲಿರುತ್ತಾನೆಯೋ ಅದನ್ನು ನೋಡುವುದಿಲ್ಲ" ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಭಗವದ್ಗೀತೆಯೂ ಈ ಮಾತನ್ನು ಪುಷ್ಟೀಕರಿಸುತ್ತ, ಕಾಮನೆಯ ವಸ್ತುಗಳು ಮುಂದೆ ಇರುವುದು, ಬಿಡುವುದು ಮುಖ್ಯವಲ್ಲ. ಮನಸ್ಸಿನಲ್ಲಿ ಅದರ ರುಚಿಯನ್ನು ತಡೆಹಿಡಿಯುವುದು ಮುಖ್ಯ ಎಂದು ಹೇಳುತ್ತದೆ; ಮುಂದುವರಿದು, ಕೇವಲ ಅಗ್ನಿಯನ್ನು ಬಿಟ್ಟವನು, ಅಂದರೆ ಕರ್ಮತ್ಯಾಗ ಮಾಡಿದವನು ಮಾತ್ರವೇ ಸಂನ್ಯಾಸಿ ಎನ್ನಿಸಿಕೊಳ್ಳುವುದಕ್ಕೆ ಯೋಗ್ಯನಲ್ಲ; ಯೋಗವಿಲ್ಲದೆ, ಅಂದರೆ ಮನಸ್ಸಿನ ನಿಯಂತ್ರಣವಿಲ್ಲದೆ ಸಂನ್ಯಾಸವು ಅಸಾಧ್ಯ ಎಂದೂ ವಿವರಿಸುತ್ತದೆ.


ಈ ವಿಷಯದಲ್ಲಿ ಒಂದು ಸೊಗಸಾದ ದೃಷ್ಟಾಂತವನ್ನು ಶ್ರೀರಾಮಕೃಷ್ಣರು ನೀಡುತ್ತಾರೆ: ಒಂದು ಸಲ ಇಬ್ಬರು ಸ್ನೇಹಿತರು ದಾರಿಯಲ್ಲಿ ಹೋಗುತ್ತಿದ್ದರು. ಒಬ್ಬ ಮತ್ತೊಬ್ಬನಿಗೆ, "ಗೆಳೆಯ, ಪವಿತ್ರ ಭಾಗವತವನ್ನು ಕೇಳೋಣ, ಬಾ" ಎಂದ. ಇಬ್ಬರೂ ಕೇಳಲು ಹೋದರು. ಎರಡನೆಯವನು ಸ್ವಲ್ಪ ಇಣುಕಿ ಹಾಕಿ ಹೊರಗೆ ಬಂದ. ಅನಂತರ ಅವನು ಒಬ್ಬ ವೇಶ್ಯೆಯ ಮನೆಗೆ ಹೋದ. ಅವನಿಗೆ ಸ್ವಲ್ಪದರಲ್ಲಿಯೇ ಅಸಹ್ಯವಾಯಿತು. "ಎಂತಹ ತಿಳಿಗೇಡಿ ನಾನು! ನನ್ನ ಸ್ನೇಹಿತ ಹರಿನಾಮವನ್ನು ಕೇಳುತ್ತಿದ್ದಾನೆ. ಆದರೆ ನಾನು ಎಂತಹ ಸ್ಥಳದಲ್ಲಿರುವೆ" ಎಂದು ಪೇಚಾಡಿಕೊಂಡ. ಇತ್ತ ಭಾಗವತವನ್ನು ಕೇಳುತ್ತಿರುವವನಿಗೂ ಬೇಜಾರಾಯಿತು. "ಪ್ರವಚನಕಾರನು ಏನೇನೂ ಕೆಲಸಕ್ಕೆ ಬಾರದ್ದನ್ನು ಇಲ್ಲಿ ಹೇಳುತ್ತಿದ್ದಾನೆ. ಆದರೆ ನನ್ನ ಸ್ನೇಹಿತ ಮಜಾ ಮಾಡುತ್ತಿದ್ದಾನೆ" ಎಂದುಕೊಂಡ. ಇಬ್ಬರೂ ಸತ್ತರು. ವೇಶ್ಯೆಯ ಮನೆಗೆ ಹೋಗಿದ್ದವನು ಸ್ವರ್ಗಕ್ಕೆ ಹೋದ. ಭಾಗವತ ಕೇಳುತ್ತಿದ್ದವನು ನರಕಕ್ಕೆ ಹೋದ.

ಹೀಗೆ ಅತ್ಯಂತ ಕೆಡುಕನ್ನು ಮಾಡುವ ಕಾಮವನ್ನು ಗೆಲ್ಲುವುದಾದರೂ ಹೇಗೆ? ಇದೇ ಪ್ರಶ್ನೆಯನ್ನು ಅರ್ಜುನನು ಕೃಷ್ಣನ ಮುಂದೆ ಇಡುತ್ತಾನೆ. "ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ನಿಜವಾಗಿಯೂ ದುಸ್ಸಾಧ್ಯವಾದುದು" ಎಂದು ಕೃಷ್ಣನೂ ಒಪ್ಪಿಕೊಳ್ಳುತ್ತಾನೆ. ಆದರೆ ಅದನ್ನು ಸಾಧಿಸದೆ ಯೋಗಮಾರ್ಗದಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತಾನೆ. ಅದಲ್ಲದೆ, ಅದಕ್ಕಾಗಿ, **ಅಭ್ಯಾಸ ವೈರಾಗ್ಯ**ಗಳೆಂಬ ಎರಡು ಪ್ರಮುಖ ಸಾಧನೆಗಳನ್ನೂ ಬೋಧಿಸುತ್ತಾನೆ.

ಶ್ರೀರಾಮಕೃಷ್ಣರನ್ನು ಯಾರೋ ಒಮ್ಮೆ ಕೇಳಿದರು, "ನೀವು ಸಾಧಾರಣ ಗೃಹಸ್ಥರಂತೆ ಏಕೆ ಇರಬಾರದು?" ಎಂದು. ಅದಕ್ಕೆ ಒಂದು ಕಥೆಯನ್ನು ಅವರು ಹೇಳುತ್ತಾರೆ, "ಒಂದು ಸಲ ಶಿವನ ಮಗನಾದ ಕಾರ್ತಿಕೇಯ ಒಂದು ಬೆಕ್ಕನ್ನು ಉಗುರಿನಿಂದ ಪರಚಿದ. ಮನೆಗೆ ಬಂದು ನೋಡುತ್ತಾನೆ, ಅಮ್ಮ ಪಾರ್ವತಿಯ ಗಲ್ಲದ ಮೇಲೆ ಆ ಬರೆ ಎದ್ದುಕಾಣುತ್ತಿದೆ! ಕಾರ್ತಿಕೇಯ ಪ್ರಶ್ನಿಸಿದಾಗ, ಪಾರ್ವತಿ ಹೇಳಿದಳು, 'ಇದನ್ನು ನೀನೇ ಮಾಡಿದ್ದು. ನೀನು ಬೆಕ್ಕನ್ನು ಪರಚಲಿಲ್ಲವೇ? ಇಡೀ ಸೃಷ್ಟಿಯೆಲ್ಲ ನಾನೇ ಆಗಿದ್ದೇನೆ. ನೀನು ಯಾರಿಗೆ ಹಿಂಸೆ ಮಾಡಿದರೂ, ಅದು ನನಗೇ ಹಿಂಸೆ ಮಾಡಿದಂತೆ. ಇದನ್ನು ಕೇಳಿ ಕಾರ್ತಿಕೇಯನಿಗೆ ಆಶ್ಚರ್ಯವಾಯಿತು. ಪ್ರತಿಯೊಬ್ಬ ಸ್ತ್ರೀಯೂ ತನ್ನ ತಾಯಿಯ ರೂಪದಂತೆಯೇ ಅವನಿಗೆ ಕಂಡುಬಂದರು. ಹೀಗಾಗಿ ಅವನು ಮದುವೆ ಆಗಲೇ ಇಲ್ಲ." ಇಷ್ಟು ಹೇಳಿ, ಶ್ರೀರಾಮಕೃಷ್ಣರು ಹೇಳುತ್ತಾರೆ, "ನಾನೂ ಕಾರ್ತಿಕೇಯನಂತೆ ಪ್ರತಿಯೊಬ್ಬ ಸ್ತ್ರೀಯಲ್ಲಿಯೂ ಜಗನ್ಮಾತೆಯನ್ನೇ ಕಾಣುವೆ." ನಮ್ಮ ಮನಸ್ಸಿನಲ್ಲಿ ಆಗಾಗ್ಗೆ ಹೆಡೆಯೆತ್ತುವ ಕಾಮಲಾಲಸೆಗೆ, ಶ್ರೀರಾಮಕೃಷ್ಣರು ಆದರ್ಶವಾಗಿ ತೋರುವ ಈ ಪರಿಶುದ್ಧ ಭಾವನೆಯೇ ಅತ್ಯಂತ ಪ್ರಭಾವಶಾಲಿಯಾದ ಮದ್ದು. ಮಾತೃತ್ವದ ಭಾವನೆಯ ಮುಂದೆ ಒಬ್ಬ ಸ್ತ್ರೀಯು ಕಾಮಿನಿಯೆಂಬ ಆಲೋಚನೆ ಅಡಗಿಹೋಗುವುದು. ಇದೇ ಶ್ರೀರಾಮಕೃಷ್ಣರು ನಡೆದು ತೋರಿಸಿರುವ ಆದರ್ಶ.

**ಕಾಮಃ ಕ್ರೋಧಸ್ತಥಾ ಲೋಭಃ ತಸ್ಮಾತ್ ಏತತ್ ತ್ರಯಂ ತ್ಯಜೇತ್** – ಕಾಮ, ಕ್ರೋಧ, ಲೋಭ ಇವುಗಳನ್ನು ತ್ಯಜಿಸಬೇಕು ಎಂದು ಶ್ರೀಕೃಷ್ಣ ಹೇಳುತ್ತಾನೆ. ಮನುಷ್ಯನ ಮೂಲಭೂತ ದೌರ್ಬಲ್ಯಗಳಲ್ಲಿ ಹಣದ ಮೇಲಿನ ಅತ್ಯಾಶೆಯೂ ಒಂದು. ಇದು ಎಲ್ಲಾ ಬಗೆಯ ಅನೈತಿಕ ಆಚರಣೆಗಳಿಗೂ, ಅಧಃಪತನಕ್ಕೂ ಎಡೆಮಾಡಿಕೊಡುತ್ತದೆ. ಅದಕ್ಕೆಂದೇ ಹಣವು ಉಪಾಧಿಗಳಲ್ಲಿ ಅತಿ ಪ್ರಬಲವಾದುದು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಉಪಾಧಿಗಳು ಎಂದರೆ ಮಾಯೆ ಅಥವಾ ಅವಿದ್ಯೆಯನ್ನು ಉಂಟುಮಾಡುವ ಸಾಧನಗಳು. ಹಿಂದೊಮ್ಮೆ ಬಡವನಾಗಿದ್ದ ಬ್ರಾಹ್ಮಣನೊಬ್ಬನು ಒಂದು ಸಲ ರಾಮಕೃಷ್ಣರನ್ನು ಕಂಡು, "ಏನು ಠಾಕೂರರೇ, ಈಗ ನೀವು ಹೇಗಿದ್ದೀರಿ?" ಎಂದು ಗರ್ವದಿಂದ ಮಾತನಾಡಿಸುತ್ತಾನೆ. ಅದನ್ನು ಕಂಡು ಅವರು ತಮ್ಮ ಸೋದರಳಿಯ ಹೃದಯನಿಗೆ, "ಇವನಿಗೆ ಏನೋ ಆಸ್ತಿ ಸಿಕ್ಕಿರಬೇಕು. ಇವನಲ್ಲಿ ಆದ ಬದಲಾವಣೆಯನ್ನು ಗಮನಿಸು" ಎನ್ನುತ್ತಾರೆ. ಈ ವಿಷಯದಲ್ಲಿ ಒಂದು ಚಿಕ್ಕ ದೃಷ್ಟಾಂತ ಕಥೆಯನ್ನೂ ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಒಂದು ಕಪ್ಪೆಯ ಹತ್ತಿರ ಒಂದು ರೂಪಾಯಿ ಇತ್ತು. ಅದನ್ನು ಅದು ಒಂದು ಬಿಲದಲ್ಲಿ ಬಚ್ಚಿಟ್ಟಿತ್ತು. ಒಂದು ದಿನ ಒಂದು ಆನೆ ಬಿಲದ ಮೇಲೆ ಕಾಲಿಟ್ಟುಕೊಂಡು ಹೋಗುತ್ತಿತ್ತು. ಕಪ್ಪೆಗೆ ತುಂಬಾ ಕೋಪ ಬಂದಿತು.

ಕಾಲನ್ನೆತ್ತಿ ಆನೆಗೆ ಹೊಡೆಯುವುದಕ್ಕೆ ಕೂಡ ಹೋಯಿತು. ಅಷ್ಟಲ್ಲದೆ, 'ನನ್ನ ಬಿಲದ ಮೇಲೆ ಏರಿ ಹೋಗುತ್ತಿದ್ದೀಯಲ್ಲ. ನಿನಗೆಷ್ಟು ಧೈರ್ಯ?' ಎಂದೂ ಕೇಳಿತು. ಶ್ರೀರಾಮಕೃಷ್ಣರು ಹೇಳುತ್ತಾರೆ, ಹಣದ ಮದ ಹೀಗೆ ಮಾಡಿಸುತ್ತದೆ ಎಂದು.



## ಮಾಯೆ

ಮಾಯೆಯನ್ನು ಕುರಿತು ವೇದಾಂತದಲ್ಲಿ ವಿಸ್ತಾರವಾದ ಚರ್ಚೆ ಬರುತ್ತದೆ. **ಅಘಟನಘಟನಾ ಪಟೀಯಸೀ ಮಾಯಾ** – ಯಾವುದು ನಡೆದೇ ಇಲ್ಲವೋ, ಅದು ನಡೆದಂತೆ ಕಾಣಿಸುವುದು ಮಾಯೆ ಎಂದು ಶ್ರೀಶಂಕರಾಚಾರ್ಯರು ಬೋಧಿಸುತ್ತಾರೆ. ಅದಲ್ಲದೆ, ಮಾಯೆಯು ಅನಿರ್ವಚನೀಯ – ತರ್ಕದಿಂದ ವಿವರಿಸಲಾಗದ್ದು ಎಂದೂ ಅವರು ಹೇಳುತ್ತಾರೆ. "ನಾವು ನೋಡುವ ಜಗತ್ತು ದ್ವಂದ್ವ ಮತ್ತು ವಿರೋಧಾಭಾಸಗಳಿಂದ ಕೂಡಿದ್ದು. ಈ ವಾಸ್ತವ ಸ್ಥಿತಿಯೇ ಮಾಯೆ" ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಡುತ್ತಾರೆ. ಇದೇನೇ ಇರಲಿ, ಮಾಯೆಯು ದುಃಖವನ್ನು ಕೊಡುವುದಂತೂ ಎಲ್ಲರೂ ಅನುಭವಿಸುವ ಕಟು ಸತ್ಯ. ಆದರೆ ಎಂಥ ದುಃಖದ ಮಧ್ಯದಲ್ಲಿ ಇದ್ದರೂ ಅದನ್ನು ತ್ಯಜಿಸುವ ಬುದ್ಧಿ ಮನುಷ್ಯನಿಗೆ ಬರುವುದಿಲ್ಲ. ಇದೇ 'ಮೋಹ'.

ಮಾಯೆಗೆ ಎರಡು ಶಕ್ತಿಗಳಿವೆ: ೧. ಸತ್ಯವನ್ನು ಮರೆಮಾಚುವ **ಆವರಣಶಕ್ತಿ** ; ೨. ಇಲ್ಲದ್ದನ್ನು ಎತ್ತಿತೋರಿಸುವ **ವಿಕ್ಷೇಪಶಕ್ತಿ**. ನಮ್ಮ ನೈಜಸ್ವರೂಪವನ್ನು ಮಾಯೆಯು ಮರೆಮಾಚಿರುವುದರಿಂದ ನಮಗೆ 'ದುಃಖ' ಉಂಟಾಗುತ್ತದೆ. "ನಾವು" ಅಲ್ಲದ್ದನ್ನು, "ನಮ್ಮ"ದಲ್ಲದ್ದನ್ನು ಮಾಯೆಯು ಎತ್ತಿ ತೋರಿಸುವುದರಿಂದ 'ಮೋಹ' ಉಂಟಾಗುತ್ತದೆ. ಹೀಗೆ ದುಃಖ ಮೋಹಗಳ ಹಾವಳಿಗೆ ಸಿಕ್ಕಿದ ಜೀವಿಯು ಸಾವಿರಾರು ಜನ್ಮಗಳ ಕಾಲ ತೊಳಲಾಡುತ್ತಾನೆ. ಇದನ್ನೇ 'ಸಂಸಾರ' ಎನ್ನುತ್ತಾರೆ.

ಮಾಯೆಯ ದಟ್ಟ ಪ್ರಭಾವವನ್ನೂ, ಕಠೋರತೆಯನ್ನೂ ಶ್ರೀರಾಮಕೃಷ್ಣರು ಹೇಳುವ ಕಥೆಗಳು ಅತ್ಯಂತ ಮಾರ್ಮಿಕವಾಗಿ ಚಿತ್ರಿಸುತ್ತವೆ. ಈ ಕಥೆಯನ್ನು ಕೇಳಿ. ಹಿರಣ್ಯಾಕ್ಷನನ್ನು ಕೊಂದ ವಿಷ್ಣುವು ವರಾಹದ (ಹಂದಿ) ರೂಪದಲ್ಲಿಯೇ ಇರಲು ಇಷ್ಟಪಟ್ಟನಂತೆ. ಆ ಹಂದಿ ಸಂಸಾರವನ್ನು ಕಟ್ಟಿಕೊಂಡು, ಮಕ್ಕಳುಮರಿಗಳೊಡನೆ ಆನಂದವಾಗಿತ್ತು. ದೇವತೆಗಳು ಅದಕ್ಕೆ ಅದರ ನಿಜರೂಪವನ್ನು ನೆನಪು ಮಾಡಿಕೊಟ್ಟರೂ ಏನೂ ಪ್ರಯೋಜನವಾಗಲಿಲ್ಲ. ಕಡೆಗೆ ಶಿವ ಬಂದು ವಿಚಾರಿಸಿದಾಗ, ಹಂದಿಯ ರೂಪದಲ್ಲಿದ್ದ ವಿಷ್ಣು, "ನಾನು ಇಲ್ಲಿಯೇ ಚೆನ್ನಾಗಿದ್ದೀನಲ್ಲ" ಎಂದನು. ಆಗ ಶಿವ ತನ್ನ ತ್ರಿಶೂಲದಿಂದ ಹಂದಿಯ ದೇಹವನ್ನು ನಾಶಮಾಡುತ್ತಾನೆ. ಆಗ ಮಾತ್ರ ವಿಷ್ಣು ವೈಕುಂಠಕ್ಕೆ ಹೋಗುತ್ತಾನೆ. ಈ ಕಥೆಯನ್ನು ಶ್ರೀರಾಮಕೃಷ್ಣರು ಹೀಗೆ ವಿವರಿಸುತ್ತಾರೆ: "ಪ್ರತಿಯೊಬ್ಬರೂ ಮಾಯೆಯ ಅಧೀನದಲ್ಲಿ ಇರುವವರೇ. ದೇವರ ಅವತಾರಗಳು ಕೂಡ ಮಾಯೆಯ ಆಶ್ರಯವನ್ನು ಪಡೆದೇ ತಮ್ಮ ಪಾಲಿನ ಕೆಲಸವನ್ನು ಮಾಡುತ್ತಾರೆ. ಅದಕ್ಕಾಗಿಯೇ ಮಹಾಮಾಯೆಯನ್ನು ಕೊಂಡಾಡುವುದು." ಅಂಥ ಮಾಯೆಯನ್ನೇ ಜಗನ್ಮಾತೆಯೆಂದು ಶ್ರೀರಾಮಕೃಷ್ಣರು ಆರಾಧಿಸುತ್ತಿದ್ದರು. ಅವರು ಹೇಳುತ್ತಾರೆ, "ಮಾಯೆಯ ಮೂಲಕವೇ ಬ್ರಹ್ಮಸಾಕ್ಷಾತ್ಕಾರ... ಬ್ರಹ್ಮದ ವ್ಯಕ್ತಸ್ವರೂಪವಾದ ಶಕ್ತಿಯನ್ನು ಅರಿತಲ್ಲದೆ ಬ್ರಹ್ಮಾನುಭವಕ್ಕೆ ಬೇರೆ ಮಾರ್ಗವಿಲ್ಲ. ಮಾಯೆಯ ಅನುಗ್ರಹದಿಂದ ಮಾತ್ರ ಪರಮಜ್ಞಾನ ಮತ್ತು ಪರಮಾನಂದ ಹೊಂದಲು ಸಾಧ್ಯ... ದ್ವೈತ ಮತ್ತು ದ್ವಂದ್ವಭಾವ ಮಾಯೆಯಿಂದಲೇ ಮೂಡುತ್ತದೆ. ಮಾಯೆಯ ಆಚೆ ಭೋಕ್ತೃತ್ವವೂ ಇಲ್ಲ, ಭೋಜ್ಯವೂ ಇಲ್ಲ."

ಮಾಯೆಯ **ಆವರಣಶಕ್ತಿ**ಯನ್ನು ವಿವರಿಸುವ ಪ್ರಸಂಗವೊಂದನ್ನು ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದರು: "ದಕ್ಷಿಣೇಶ್ವರಕ್ಕೆ ಬಂದ ಒಬ್ಬ ಸಾಧು ಸದಾ ಧ್ಯಾನದಲ್ಲಿ ಕಾಲ ಕಳೆಯುತ್ತಿದ್ದ. ಒಂದು ದಿನ ಇದ್ದಕ್ಕಿದ್ದಂತೆ ಮೋಡ ಆವರಿಸಿತು. ಸ್ವಲ್ಪ ಕಾಲದ ಮೇಲೆ ದೊಡ್ಡ ಗಾಳಿ ಬೀಸಿ ಮೋಡವನ್ನು ಚದುರಿಸಿತು. ಸಾಧು ತನ್ನ ಕೋಣೆಯಿಂದ ಹೊರಗೆ ಬಂದು ಕುಣಿದು ಕುಪ್ಪಳಿಸುತ್ತಿದ್ದ. ಆಗ ನಾನು ಹೀಗೇಕೆಂದು ಕೇಳಿದೆ. ಅದಕ್ಕೆ ಆ ಸಾಧು ಹೇಳಿದ, 'ಪ್ರಪಂಚವನ್ನು ಆವರಿಸಿರುವ ಮಾಯೆಯ ಸ್ವಭಾವ ಇದು. ಮೊದಲು ಆಕಾಶ ತಿಳಿಯಾಗಿತ್ತು. ಸ್ವಲ್ಪ ಹೊತ್ತಾದ ಮೇಲೆ ಮೋಡ ಆವರಿಸಿತು. ಈಗ ಅದೆಲ್ಲ ಹೋಗಿ ಆಕಾಶ ಮತ್ತೆ ತಿಳಿಯಾಗಿದೆ.' ಹೀಗೆಯೇ ಮನಸ್ಸನ್ನೂ ಅಜ್ಞಾನದ ಮೋಡ ಕವಿಯುತ್ತದೆ."